# ಪಿಚ್ಚರ್ ಬಿಡ್ತು...

ಕಾಲಕ್ಕೆ ತಕ್ಕಂತೆ ಕೆಲವು ಪದ, ನುಡಿಗಟ್ಟುಗಳು ಅಪ್‌ಡೇಟ್ ಆಗುತ್ತಲೇ ಇವೆ. ಅದರಲ್ಲಿ ವಿದ್ಯಾರ್ಥಿಗಳ ಕೊಡುಗೆಯಂತೂ ಅಪಾರವಿದೆ. ಅವರ ಬಾಯಲ್ಲಿ ಕೇಳುವ ಸ್ಲ್ಯಾಂಗ್‌ಗಳನ್ನು ಒಟ್ಟುಹಾಕಿದರೆ ದೊಡ್ಡ ಪದಕೋಶವೇ ಆಗಬಹುದೇನೋ...

■ ಸಮತಾ ಆರ್.




ಆಕ್ಸ್‌ಫರ್ಡ್ ಶಬ್ದಕೋಶಕ್ಕೆ ಪ್ರತಿ ವರ್ಷ ಹೊಸದಾಗಿ ಚಲಾವಣೆಗೆ ಬಂದಿರುವ ಪದಗಳನ್ನು, ನುಡಿಗಟ್ಟುಗಳನ್ನು ಸೇರಿಸುತ್ತಾ ವರ್ಷದಿಂದ ವರ್ಷಕ್ಕೆ ಆ ಪುಸ್ತಕದ ಗಾತ್ರ ಹಿಗ್ಗುತ್ತಲೇ ಇದೆ. ಇದೇ ರೀತಿ ಕನ್ನಡದಲ್ಲೂ ಹೊಸ ಹೊಸ ಪದಗಳನ್ನು ಸೇರಿಸುವುದು ಆಗುತ್ತಾ ಇದೆಯೋ ಏನೋ ನನಗೆ ಗೊತ್ತಿಲ್ಲ. ಹಾಗೇನಾದರೂ ಹೊಸ ಹೊಸ ಪದಗಳು, ನುಡಿಗಟ್ಟುಗಳು ಬೇಕಾದರೆ ನನ್ನ ವಿದ್ಯಾರ್ಥಿಗಳಷ್ಟು ಸಂಪನ್ಮೂಲ ವ್ಯಕ್ತಿಗಳು ಇನ್ನೆಲ್ಲೂ ಸಿಗೋದಿಲ್ಲ. ಎಷ್ಟೋ ಬಾರಿ ಅವರು ಬಳಸುವ ಭಾಷೆ, ನುಡಿಗಟ್ಟುಗಳ ಅರ್ಥ ಹೊಳೆಯದೆ ಅವರನ್ನೇ ಕೇಳಿದಾಗ, 'ಅಯ್ಯೋ ಮೇಡಂ ಅಷ್ಟೂ ಗೊತ್ತಿಲ್ವಾ' ಅಂತ ಮುಸಿಮುಸಿ ನಗುತ್ತಾ ವಿವರಿಸಿ ನನ್ನನ್ನು ಚಕಿತಗೊಳಿಸುತ್ತಾರೆ.

ಚಿಂದಿ ಚಿತ್ರಾನ್ನ ಆಗಿತ್ತು ಅವಳ ಪರ್ಫಾರ್ಮೆನ್ಸ್, ಇನ್ನೊಂದ್ಸಾರಿ ನೋಡ್ಲೇಬೇಕು...

ಒಮ್ಮೆ ಹೀಗೆ ತರಗತಿ ಕೋಣೆಯೊಂದರ ಮೂಲೆಯಲ್ಲಿ ಕಟ್ಟಿದ್ದ ಮಣ್ಣಿನ ಪುಟ್ಟ ಗೂಡೊಂದನ್ನು ನೋಡಿ ಏನೆಂದು ತಿಳಿಯದೆ ಅಲ್ಲೇ ಇದ್ದ ಒಬ್ಬನನ್ನು ಕೇಳಿದರೆ, ಅವನು ಅದನ್ನೇ ನೋಡುತ್ತಾ, 'ಅದು ಕಡಜ, ಕಚ್ಚುದ್ರೆ ಹೊಗೆ' ಎಂದು ಬಹಳ ಸೀರಿಯಸ್ಸಾಗಿ ಹೇಳಿದ. ನನಗೆ ಕಡಜದ ಬಗ್ಗೆ ಓದಿ, ಕೇಳಿ ತಿಳಿದಿತ್ತು. ಆದರೆ ಯಾವತ್ತೂ ನೋಡಿರಲಿಲ್ಲ. ಅವನು ಹೇಳಿದ್ದೇನೋ ಸರಿ. ಆದ್ರೆ, 'ಕಚ್ಚಿದ್ರೆ ಹೊಗೆ' ಅನ್ನೋ ಮಾತು ಸಖತ್ ಕನ್ಫ್ಯೂಸ್ ಮಾಡಿತು.

'ಲೋ ಹಂಗಂದ್ರೆ ಏನೋ! ಅದು ಕಚ್ಚಿದರೆ ಹೊಗೆ ಬರುತ್ತಾ!' ಎಂದಿದ್ದಕ್ಕೆ ಅವನು ನನ್ನನ್ನು ಈ ವಿಚಿತ್ರ, ದಡ್ಡ, ಏನೂ ಗೊತ್ತಿಲ್ಲದವಳ ಅದ್ಯಾವನು ಟೀಚರ್ ಮಾಡಿದ ಅನ್ನೋ ನೋಟದಲ್ಲಿ ನೋಡಿದ. ಸುತ್ತಲಿದ್ದ ಇನ್ನೊಂದು ಹುಡುಗ ಹಲ್ಲು ಕಿರಿಯುತ್ತ, 'ಹಂಗಲ್ಲ ಮೇಡಂ, ಅದು ಕಚ್ಚಿದ್ರೆ ನಾವು ಸತ್ತು ಹೋಗ್ಬಹುದು, ಅದಿಕ್ಕೆ ಹಂಗಂದ' ಎಂದ. ನನಗೆ ಇನ್ನೂ ಗೊಂದಲ. ಆದರೂ ಮಕ್ಕಳನ್ನು ಕೇಳಲು ಅಭಿಮಾನ ಅಡ್ಡ ಬಂತು. 'ಓ ಹಾಗಾ' ಅಂತ ತಿಳಿದವಳ ಹಾಗೆ ಪೋಸು ಕೊಟ್ಟು, ನಂತರ ನನ್ನ ಸಹೋದ್ಯೋಗಿಯನ್ನು ಕೇಳಿದೆ. ಅವರೋ ಅಪಾರ ಮರುಕದಿಂದ ನನ್ನ ಅಜ್ಞಾನಕ್ಕೆ ಕನಿಕರಿಸುತ್ತ, 'ಯಾರಾದ್ರೂ ತೀರಿಕೊಂಡರೆ ಮನೆ ಮುಂದೆ ಕೊಂಡ ಹಾಕ್ತಾರಲ್ಲ ಅದುಕ್ಕೆ ಹಂಗೆ ಹೇಳೋದು ಕಣ್ರೀ, ಹೊಗೆ ಅಂದ್ರೆ ಮುಗೀತು ಕತೆ ಅಂತರ್ಥ' ಎಂದು ಹೇಳಿ ತಮ್ಮ ದಿವ್ಯಜ್ಞಾನದಲ್ಲಿ ನನಗೂ ಸಹಸ್ರಾಂಶದ ಒಂದು ಭಾಗ ಕರುಣಿಸಿದರು. ಅವತ್ತಿನಿಂದ ಈ ಹೊಗೆ ಅನ್ನೋ ಪದ ನಾನಾರ್ಥದಲ್ಲಿ ನಮ್ಮ ಹೈಕಳು ಪ್ರಯೋಗಿಸುವುದನ್ನು ಅರ್ಥೈಸಿಕೊಳ್ಳುವಷ್ಟು ಪ್ರವೀಣಳಾಗಿದ್ದೇನೆ.

ಏನ್ ಹವಾ ಮೇಂಟೇನ್ ಮಾಡಿದ್ಯಪ್ಪಾ ಈಗ್ಲೂ...

'ಮೇಡಂ ಇಷ್ಟು ಸ್ಪೀಡಲ್ಲಿ ಸ್ಕೂಟಿನ ಈ ಹಳ್ಳಿ ರೋಡಲ್ಲಿ ಓಡಿಸಿದ್ರೆ ಅಷ್ಟೇ, ಹೊಗೆನೇ!' ಎಂದಾಗ ಹೊಗೆ ನನಗೋ, ಸ್ಕೂಟಿಗೋ ಗೊತ್ತಾಗದೆ ಕಂಗಾಲಾಗಿದ್ದೇನೆ. 'ಹಿಂಗೇ ಅವ್ನು ಸ್ಕೂಲಿಗೆ ಚಕ್ಕರ್ ಹಾಕಿದ್ರೆ ಪರೀಕ್ಷೆಲಿ ಹೊಗೆ' ಅಂದ್ರೆ ಫೇಲ್ ಆಗುತ್ತಾನೆ ಅನ್ನೋ ಅರ್ಥ ಅಂತ ತಿಳಿಯುವಷ್ಟು ನನ್ನ ಬುದ್ಧಿ ಬೆಳೆದಿದೆ.

ಸಖತ್ ಸೈಕ್ ಆಗಿತ್ತು ಅವ್ನ ಕಾಮಿಡಿ ಗುರೂ... ನಾನಂತೂ ಫುಲ್ ಫಿದಾ...

ಅಂದ ಹಾಗೆ ಫೇಲು ಅನ್ನೋ ಪದಕ್ಕೆ ಬಳಸುವ ಸಮಾನಾರ್ಥಕ ಪದಗಳನ್ನು ನೋಡಿದರೆ ಅದಕ್ಕೇ ಒಂದು ಪ್ರತ್ಯೇಕ ಶಬ್ದಕೋಶ ಮಾಡಬೇಕಾಗುತ್ತದೆ. ಪಾಸ್ ಅನ್ನೋದು ಎಷ್ಟೊಂದು ರಸಹೀನ, ಕಳಾಹೀನ ಶಬ್ದ ನೋಡಿ. ಪಾಸ್ ಅಂತ ಹೇಳಕ್ಕೆ ಇರೋದು ಅದೊಂದೇ ಪದ. ಹೆಚ್ಚಂದ್ರೆ ನಮ್ಮ ಕನ್ನಡ ಮೇಷ್ಟ್ರು ಹೇಳೋ ಹಂಗೆ ಉತ್ತೀರ್ಣ ಅಂತ ಇನ್ನೊಂದು ಪದ ಹೇಳಬಹುದು. ಆದರೆ ಫೇಲ್‌ಗೆ ನೋಡಿ, 'ಅವ್ನು ಎಸ್ಸೆಸ್ಸೆಲ್ಸಿ ತೂಕು ಮೇಡಂ, ಪಿಯುಸಿ ನಾಕ್ ಸತಿ ಮಗುಚ್ಕೊಂಡ, ಅವ್ಳುದು ಟೆಂತಲ್ಲಿ ನಾಕ್ ಸಬ್ಜೆಕ್ಟ್ ಹೊಗೆ, ನಮ್ಮಣ್ಣ ಒಂಬತ್ತನೆ ಕ್ಲಾಸ್‌ಗೇ ಮಕ್ಕಾಡೆ ಮನಿಕೊಂಡ, ಅವನು ಡಿಗ್ರಿಲಿ ಇಂಗ್ಲಿಷ್ ದಬಾಕ್ಕೊಂಡ, ಇವಳು ಎಸ್ಸೆಸ್ಸೆಲ್ಸಿ ಡುಮ್ಕಿ, ಹಿಂಗೇ ಓದುದ್ರೆ ಇಂಗ್ಲಿಷ್ ಗೋತ ಹೊಡಿಯುತ್ತೆ ಅಷ್ಟೇ, ಪ್ರಿಪರೇಟರಿ ಎಕ್ಸಾಮಲ್ಲೇ ನನ್ನ ಮ್ಯಾತ್ಸ್ ನೆಗೆದುಬಿತ್ತು' ಹೀಗೆ ಹೇಳ್ತಾ ಹೋದ್ರೆ ಇನ್ನೂ ಒಂದಷ್ಟು ಪದಗಳು ಸಿಗುತ್ತವೆ.

ಇದಕ್ಕಿಂತಲೂ ಮಜವಾದ ಇನ್ನೂ ಒಂದು ನುಡಿಗಟ್ಟಿದೆ. ಅದೇನಾಯ್ತು ಅಂದ್ರೆ, ಒಂದಿನ ಕಂಪ್ಯೂಟರ್ ಲ್ಯಾಬ್‌ನಲ್ಲಿ ಒಂದು ಕಂಪ್ಯೂಟರ್ ಆನ್ ಆಗದೆ ಇದ್ದಾಗ ನನ್ನ ವಿದ್ಯಾರ್ಥಿಯೊಬ್ಬನನ್ನು ಕರೆದು 'ಲೋ ಇದೇನು ನೋಡೋ ಆನ್ ಆಗ್ತಾನೆ ಇಲ್ಲ' ಎಂದಿದ್ದಕ್ಕೆ, ಅವನು 'ಏ ಬಿಡಿ ಮೇಡಂ, ಆ ಕಂಪ್ಯೂಟರ್ ಪಿಚ್ಚರ್ ಬಿಟ್ಟು ಬಾಳಾ ದಿನಾಯ್ತು' ಅಂದ.

ನನಗೋ ದಿಗಿಲು. ಈ ಮಕ್ಕಳೇನು ಕಂಪ್ಯೂಟರ್